**O.S.4357/2017**
**DW-1**

**ದಿನಾಂಕಃ 24.10.2025 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣೀಕರಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ವಾದಿ ಸ್ವತಃ**

ದಿನಾಂಕ 22.11.2012 ಹಾಗೂ 25.05.2017 ರ ಮದ್ಯೆ  ನಾನು ವಾದಿಗೆ ನೀಡಿದ್ದ ಹಣವನ್ನು ವಾಪಸ್ಸು ಕೇಳಿ ನೋಟಿಸನ್ನು ಜಾರಿ ಮಾಡಿಲ್ಲ. ನಾನು ವಾದಿಗೆ ನೀಡಿದ ಉತ್ತರದಲ್ಲಿ ವಾದಿಯೇ ನನಗೆ ಹಣ ನೀಡಬೇಕೆಂದು ವಾದಿಯ ಬಳಿ ನಾನು ಕೇಳಿಕೊಂಡಿಲ್ಲ ಎಂದರೆ ಸರಿ. ನಾನು ವಾದಿಯ ಬಳಿ ಅವರಿಗೆ ನಾನು ನೀಡಿದ ಹಣವನ್ನು ವಾಪಸ್ಸು ಕೊಡುವಂತೆ ಯಾವುದೇ ಒತ್ತಾಯವನ್ನು ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ನಾನು ನೀಡಿರುವ ನೋಟಿಸಿನ ವಿಚಾರಗಳಿಗೆ ನನ್ನ ಕೌಂಟರ್ ಕ್ಲೇಮ್ ನ ವಿಚಾರಗಳಿಗೂ ಒಂದಕ್ಕೊಂದು ವ್ಯತ್ಯಾಸಗಳು ಇವೆ ಎಂದರೆ ಸರಿಯಲ್ಲ. ನಾನು ನನ್ನ ಕೌಂಟರ್ ಕ್ಲೇಮ್ ನಲ್ಲಿ ವಾದಿಯು ಅವರ ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಸಾಲ ಪಡೆದಿರುವುದಾಗಿ ಹೇಳಿದ್ದು ನಾನು ವಾದಿಗೆ ನೀಡಿದ ನೋಟಿಸಿನಲ್ಲಿ ಸದರಿ ವಿಚಾರದಲ್ಲಿ ಹೇಳಿಲ್ಲ ಎಂದರೆ ಸರಿಯಲ್ಲ. 2012 ರಲ್ಲಿ ವಾದಿಯ ಮಕ್ಕಳು ಶಾಲೆಗೆ ಹೋಗುವ ವಯಸ್ಸು ಹೊಂದಿರದೆ ಇದ್ದರೂ ಸಹಾ ವಾದಿಯು ಅವರ ಮಕ್ಕಳ ವಿದ್ಯಾಭ್ಯಾಸಕ್ಕಾಗಿ ನನ್ನಿಂದ ಸಾಲ ಪಡೆದಿರುವುದಾಗಿ ಸುಳ್ಳು ಹೇಳಿದ್ದೇನೆ ಎಂದರೆ ಸರಿಯಲ್ಲ. ದಿನಾಂಕ 25.05.2017 ರ ನೋಟಿಸು ವಾದಿಗೆ ಜಾರಿಯಾಗಿಲ್ಲ ಎಂದರೆ ಸರಿಯಲ್ಲ. ನಾನು ಆ ಬಗ್ಗೆ ಅಂಚೆ ಸ್ವೀಕೃತಿಯನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿಲ್ಲ ಎಂದರೆ ಸರಿಯಲ್ಲ. ನಾನು ಅಂಚೆ ಸ್ವೀಕೃತಿಯನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿದ ಕಾರಣ ಅದು ನಿಶಾನೆಯಾಗಿ ಗುರುತಾಗಿಲ್ಲ ಎಂದರೆ ಸರಿಯಲ್ಲ. ನರಸಿಂಹಮೂರ್ತಿ ಎನ್ನುವವರು

ವರದ ರಾಜು ರವರ ಸಂಬಂಧಿಕ ಎಂದರೆ ಸರಿ. ನರಸಿಂಹಮೂರ್ತಿ ಎನ್ನುವವರು ವರದರಾಜು ರವರ ಆಟೋವನ್ನು ಓಡಿಸುತ್ತಾರೆ. ನರಸಿಂಹಮೂರ್ತಿ ಎನ್ನುವವರು ಆಟೋವನ್ನು ಬಾಡಿಗೆಗೆ ಓಡಿಸುತ್ತಿದ್ದರು ಎಂದರೆ ಸರಿ. ನಾನು ವಾದಿಯ ಹಣವನ್ನು ಸಂಜೆಯ ಸಮಯದಲ್ಲಿ ವಾದಿಯ ಕಬ್ಬನ್ ಪೇಟೆಯಲ್ಲಿದ್ದ ಕಛೇರಿಯಲ್ಲಿ ನೀಡಿರುತ್ತೇನೆ. ಸದರಿ ಕಛೇರಿ ಕಬ್ಬನ್ ಪೇಟೆಯ 2 ನೇ ಕ್ರಾಸ್ ನಲ್ಲಿ ಮೊದಲನೇ ಮಹಡಿಯಲ್ಲಿ ಇದೆ. ಸದರಿ ಕಟ್ಟಡದ  ಸಂಖ್ಯೆ ನನಗೆ ನೆನಪಿಲ್ಲ. ನಾನು ದಿನಾಂಕ 22.11.2012 ರಂದು ಬ್ಯಾಂಕ್ ನಿಂದ ಹಣವನ್ನು ಡ್ರಾ ಮಾಡಿಕೊಂಡು ಅದೇ ದಿನ ವಾದಿಗೆ ಹಣವನ್ನು ನೀಡಿರುತ್ತೇನೆ. ನನಗೆ ವಾದಿಯ ಕಚೇರಿಯ ವಿಳಾಸ ಗೊತ್ತಿಲ್ಲ ಎಂದರೆ ಸರಿಯಲ್ಲ. ನಾನು ವಾದಿಗೆ ಯಾವುದೇ ಹಣವನ್ನು ನೀಡದೆ ಇದ್ದರೂ ವಾದಿಯ ವಿರುದ್ಧ ಸುಳ್ಳು ಕ್ಲೇಮು ಮಾಡುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಒಂದು ವೇಳೆ ವಾದಿಗೆ ಹಣ ನೀಡಿದ್ದರೆ ಆ ಬಗ್ಗೆ ದಾಖಲೆಗಳನ್ನು ಮಾಡಿಕೊಳ್ಳುತ್ತಿದ್ದು ಯಾವುದೇ ದಾಖಲೆ ಇಲ್ಲದ ಕಾರಣ ವಾದಿಗೆ ನಾನು ಯಾವುದೇ ಹಣವನ್ನು ನೀಡಿಲ್ಲ ಎಂದರೆ ಸಾಕ್ಷಿ ನುಡಿಯುತ್ತಾರೆ ವಿಶ್ವಾಸದ ಆಧಾರದಲ್ಲಿ ವಾದಿಗೆ ಹಣ ನೀಡಿರುತ್ತೇನೆ. 2 ಲಕ್ಷ ರೂ ಹಣವನ್ನು ಚೆಕ್ಕು ಮೂಲಕ ನೀಡಲು ನಿಮಗೆ ಏನು ತೊಂದರೆ ಇತ್ತು ಎಂದರೆ ಸಾಕ್ಷಿ ನುಡಿಯುತ್ತಾರೆ ಆಗ ನಾನು ಚೆಕ್ಕು ಮೂಲಕ ವ್ಯವಹಾರ ಮಾಡುತ್ತಿರಲಿಲ್ಲ. ನಾನು ವಾದಿಗೆ ನಿಪಿ 1 ಮತ್ತು 2 ರ ದಾಖಲೆಗಳಿಗೆ ಸಹಿ ಮಾಡಿ ನೀಡಿದ್ದರೂ ಸಹಾ ವಾದಿಗೆ ನೀಡಬೇಕಾದ ಹಣವನ್ನು ಪಾವತಿಸುವುದರಿಂದ ತಪ್ಪಿಸಿಕೊಳ್ಳಲು ನಾನು ಅವುಗಳನ್ನು ಸಹಿ ಮಾಡಿಕೊಟ್ಟಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸಾಕ್ಷಿ ನುಡಿಯುತ್ತಾರೆ ಅವುಗಳನ್ನು ಸೃಷ್ಟಿಸಿಕೊಂಡಿರುವ ದಾಖಲೆಗಳು. ನಾನು ಬೆಂಗಳೂರು

ನ್ಯಾಯಾಲಯದ ಬಳಿ ಶ್ರೀನಿವಾಸ್ ಹಾಗೂ ಕೌಶಿಕ್ ಎಂಬ ಸಾಕ್ಷಿಗಳ ಸಮಕ್ಷಮ ವಾದಿಯಿಂದ 5 ಲಕ್ಷ ರೂ ಹಣವನ್ನು ಪಡೆದುಕೊಂಡು ನಂತರ ನಿಪಿ 1 ರ ದಾಖಲೆಗೆ ಸಹಿ ಮಾಡಿಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ಆ ದಿನ ವರದರಾಜು ಎನ್ನುವವರು ಸಹಾ ಹಾಜರು ಇದ್ದು ಅವರನ್ನು ಸಾಕಿಯಾಗಿ ಸಹಿ ಮಾಡಿ ಎಂದು ಕೇಳಿದಾಗ ಅವರು ತನ್ನ ಸಹಿ ಬೇಡ ಎಂದು ಹೇಳಿದ ಕಾರಣ ಶ್ರೀನಿವಾಸ್ ಹಾಗೂ ಕೌಶಿಕ್ ಎನ್ನುವವರು ಸಾಕ್ಷಿಗಳಾಗಿ ಸಹಿ ಮಾಡಿರುತ್ತಾರೆ ಎಂದೆ ಸಾಕ್ಷಿ ನುಡಿಯುತ್ತಾರೆ ಅವರು ಇಬ್ಬರು ಯಾರು ಎಂದು ನನಗೆ ಗೊತ್ತಿಲ್ಲ. ಕೌಶಿಕ್ ಎಂಬ ಸಾಕ್ಷಿಯು ನ್ಯಾಯಾಲಯಕ್ಕೆ ಸಾಕ್ಷಿ ನುಡಿಯಲು ಬಂದಾಗ ಅವರಿಗೆ ಹಣ ನೀಡಿ ಸಾಕ್ಷಿ ನುಡಿಯುವುದು ಬೇಡ ಎಂದು ಹೇಳಿ ಅವರನ್ನು ವಾಪಸ್ತು ಕಳುಹಿಸಿದ್ದೇನೆ ಎಂದರೆ ಸರಿಯಲ್ಲ.

2012 ರಿಂದ 2017 ರ ಮದ್ಯೆ ವಾದಿಯ ವಿರುದ್ದ ಅವರಿಂದ ನನಗೆ ಹಣ ಬರಲು ಬಾಕಿ ಇದೆ ಎಂದು ಕೇಳಿ ಯಾವುದೇ ದಾವೆಯನ್ನು ಸಲ್ಲಿಸಲು ನನಗೆ ತೊಂದರೆ ಇರಲಿಲ್ಲವೇ ಎಂದರೆ ಸಾಕ್ಷಿ ನುಡಿಯುತ್ತಾರೆ ಇರಲಿಲ್ಲ. ವಾದಿಯು ನನಗೆ ಯಾವುದೇ ಹಣವನ್ನು ನೀಡಲು ಬಾಕಿ ಇಲ್ಲದ ಕಾರಣ ನಾನು ವಾದಿಯ ವಿರುದ್ದ ಯಾವುದೇ ದಾವೆಯನ್ನು ಸಲ್ಲಿಸಿರಲಿಲ್ಲ ಎಂದರೆ ಸುಳ್ಳು. ನಾನು ವಾದಿಗೆ ಹಣ ನೀಡುವ ಬಾಧ್ಯತೆಯಿಂದ ತಪ್ಪಿ ಸಿಕೊಳ್ಳಲು ಬೇರೆಯವರಿಗೆ ನೀಡಿದ್ದ ಹಣವನ್ನು ಉಪಯೋಗಿಸಿಕೊಂಡು ವಾದಿಯವಿರುದ್ದ ಸುಳ್ಳು ಕ್ಲೇಮ ಮಾಡುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ವಾದಿಯಿಂದ ಪಡೆದುಕೊಂಡ ಹಣವನ್ನು ಮರು ಪಾವತಿಸಿಬೇಕಾಗುತ್ತದೆ ಎನ್ನುವ ಕಾರಣಕ್ಕೆ ನ್ಯಾಯಾಲಯದಲ್ಲಿ ಸುಳ್ಳು ಸಾಕ್ಯೆ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ನವೆಂಬರ್ 2014 ರಲ್ಲಿ ನನ್ನ ಮಗನ

ಮದುವೆಯನ್ನು ಮಾಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿ ನುಡಿಯುತ್ತಾರೆ 2015 ರಲ್ಲಿ ನಾನು ನನ್ನ ಮಗನ ಮದುವೆಯನ್ನು ಮಾಡಿರುತ್ತೇನೆ. ಆ ಬಗ್ಗೆ ದಾಖಲಾತಿಯನ್ನು ಹಾಜರು ಪಡಿಸಲು ನನಗೆ ಯಾವುದೇ ತೊಂದರೆ ಇಲ್ಲ ಎಂದರೆ ಸರಿ. ನಾನು ನನ್ನ ಮಗನ ಮದುವೆ ನಗದು ಹಣ ಬೇಕಾಗಿದ್ದ ಕಾರಣ ವಾದಿಯ ಕಛೇರಿಗೆ ಬಂದು ವಾದಿಯಿಂದ 3 ಲಕ್ಷ ರೂ ನಗದು ಹಣ ಹಾಗೂ 2 ಲಕ್ಷ ರೂ ಚೆಕ್ಕು ಮೂಲಕ ಹಣ ಪಡೆದುಕೊಂಡು ಹೋಗಿರುತ್ತೇನೆ ಎಂದರೆ ಸರಿಯಲ್ಲ. ನಾನು ವಾದಿಯಿಂದ 2 ಲಕ್ಷ ರೂ ಹಣವನ್ನು ಚೆಕ್ಕು ಮೂಲಕ ಪಡೆದುಕೊಂಡಿರುವ ಕಾರಣ ನನ್ನ ಬ್ಯಾಂಕ್ ಖಾತೆ ಹಾಗೂ ವಾದಿಯ ಬ್ಯಾಂಕ್ ಖಾತೆಯಲ್ಲಿ ಸದರಿ 2 ಲಕ್ಷ ರೂ ಹಣ ವರ್ಗಾವಣೆಯಾಗಿರುವ ಬಗ್ಗೆ ನಮೂದು ಇದೆ ಎಂದರೆ ಸಾಕ್ಷಿ ನುಡಿಯುತ್ತಾರೆ ನಾನು ಆ ರೀತಿ 2 ಲಕ್ಷ ರೂ ಹಣವನ್ನು ಪಡೆದುಕೊಂಡಿಲ್ಲ. ನಿಡಿ 1 ರಲ್ಲಿ 2 ಲಕ್ಷ ರೂ ಹಣ ವಾದಿಯ ಬ್ಯಾಂಕ್ ಖಾತೆಯಿಂದ ನನ್ನ ಖಾತೆಗೆ ವರ್ಗಾವಣೆಯಾಗಿರುವ ಬಗ್ಗೆ ನಮೂದು ಇದೆ ಎಂದರೆ ಸಾಕ್ಷಿ ನುಡಿಯುತ್ತಾರ ಹೌದು ಸದರಿ ಚೆಕ್ಕು ಬೌನ್ಸ್ ಆಗಿದೆ. ನಿಪಿ 5 ರಲ್ಲಿ ದಿನಾಂಕ 30.12.2014 ರಂದು ನನ್ನ ಬಾಂಕ್ ಖಾತೆಗೆ ಚೆಕ್ಕು ಸಂಖ್ಯೆ 389334 ರ ಮೂಲಕ 2 ಲಕ್ಷ ರೂ ಹಣ ಸಂದಾಯವಾಗಿರುವ ಬಗ್ಗೆ ನಮೂದು ಇದೆ ಎಂದರೆ ಸಾಕ್ಷಿ ನುಡಿಯುತ್ತಾರೆ ನಾನು ಆ ದಿನ ವಾದಿಯ ಕಚೇರಿಗೆ ಬಂದಿರಲಿಲ್ಲ ಹಾಗೂ ನನಗೆ ಯಾವುದೇ ಹಣ ಪಾವತಿಯಾಗಿಲ್ಲ. ನಿಪಿ 6 ರ ಚೆಕ್ಕು ನಗದಾಗದೆ ವಾಪಸ್ಸು ಬಂದ ನಂತರ ನಾನು ವಾದಿಯಿಂದ ಚೆಕ್ಕು ಸಂಖ್ಯೆ 389334 ರ ಚೆಕ್ಕನ್ನು ಪಡೆದುಕೊಂಡು ಅದನ್ನು ದಿನಾಂಕ 30.12.2014 ರಂದು ನಗದೀಕರಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ನಾನು ವಾದಿಯಿಂದ ಕಾನೂನು

ಪ್ರಕಾರ ಹಣ ಪಡೆದುಕೊಂಡಿದ್ದರೂ ಸಹಾ ನ್ಯಾಯಾಲಯದಲ್ಲಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿಯು ನನಗೆ ನಾನು ನನ್ನ ಪ್ರತಿವಾದ ಪತ್ರದಲ್ಲಿ ಕೇಳಿರುವಂತೆ ಯಾವುದೇ ಹಣವನ್ನು ಪಾವತಿಸಲು ಬಾಧ್ಯರಲ್ಲ ಎಂದರೆ ಸರಿಯಲ್ಲ. ನಾನು ವಾದಿಗೆ ಯಾವುದೇ ಹಣವನ್ನು ನೀಡಿಲ್ಲ ಎಂದರೆ ಸರಿಯಲ್ಲ. ಆ ರೀತಿ ನೀಡುವ ಬಗ್ಗೆ ಯಾವುದೇ ಸಾಕ್ಷಿದಾರರು ಇಲ್ಲ ಎಂದರೆ ಸರಿಯಲ್ಲ. 2009 ರಲ್ಲಿ ವರದರಾಜು ಎನ್ನುವವರು ಅವರ ದಾವೆಯನ್ನು ರಾಜಿ ಮಾಡಿಕೊಂಡಿದ್ದ ಕಾರಣ ಅವರು ನನ್ನ ಕಚೇರಿಗೆ 2009 ರ ನಂತರ ಬರುತ್ತಿರಲಿಲ್ಲ ಎಂದರೆ ಸರಿಯಲ್ಲ. 2009 ರ ನಂತರ ವಾದಿಯ ಜೊತೆ ನನಗಾಗಲಿ ವರದರಾಜು ಹಾಗೂ ನರಸಿಂಹಮೂರ್ತಿ ರವರಿಗಾಗಲಿ ಯಾವುದೇ ವ್ಯವಹಾರ ಇರಲಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆಃ- ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಗಿದೆ )

ಓ.ಹೇ.ಕೇ. ಸರಿ.ಇದೆ.

**(ವೇದ ಮೂರ್ತಿ ಬಿ.ಎಸ್)**
(ಪ್ರಭಾರ) 5 ನೇ ಅಪರ ನಗರ ಸಿವಿಲ್ ಮತ್ತು
ಸತ್ರ ನ್ಯಾಯಾಧೀಶರು, ಬೆಂಗಳೂರು.

**O.S.4357/2017**
**DW-1**